ಯಾಕೆಂದರೆ ಇಲ್ಲಿಯ ಬಡ್ಡಿ ಲೆಕ್ಕಾಚಾರಗಳೇ ಬೇರೆ. ತಿಂಗಳಿಗೆ ಹತ್ತು ಪರ್ಸೆಂಟ್ ಬಡ್ಡಿಯವರೆಗೂ ಇಲ್ಲಿ ವ್ಯವಹಾರ ನಡೆಯುತ್ತದೆ. ಹಾಗಾಗಿ ಬಡ್ಡಿಗೆ ದುಡ್ಡು ತಂದು ಸಿನಿಮಾ ಮಾಡಿದವನು ಗೆದ್ದರೂ ಸೋಲುತ್ತಾನೆ. ಸೋತರೆ ಸತ್ತನೆಂದೇ ಅರ್ಥ!

ಕನ್ನಡದ ಬಿಸಿರಕ್ತದ ನಿರ್ಮಾಪಕರೊಬ್ಬರು ಈಗ ತಿಂಗಳಿಗೆ ಕಟ್ಟುವ ಸಾಲದ ಬಡ್ಡಿಯೇ ಮೂವತ್ತು ಲಕ್ಷವಂತೆ! ಅಂದರೆ ಅವರು ಪಡೆದ ಸಾಲ, ಅದಕ್ಕೆ ಇರುವ ಬಡ್ಡಿ ಎಷ್ಟಿರಬಹುದು? ಇಷ್ಟು ದೊಡ್ಡ ಮೊತ್ತದ ಸಾಲ ಮಾಡಿಕೊಂಡು ಎಷ್ಟು ದಿನ ಉಳಿಯಲಾದೀತು? ಗಾಡಿಯ ಚಕ್ರ ಚಾಲ್ತಿಯಲ್ಲಿದ್ದರೆ ಇದೇನೂ ದೊಡ್ಡ ವಿಷಯವಲ್ಲ. ಅಲ್ಲಿಂದ ಬಂದಿದ್ದು ಇಲ್ಲಿಗೆ ಹೋಗಿ, ಮತ್ತೆಲ್ಲಿಂದಲೋ ತಂದು ಇನ್ನೆಲ್ಲೋ ಸುರಿದು ಅಲ್ಲಿಗಲ್ಲಿಗೆ ನಡೆಯುತ್ತಿರುತ್ತದೆ. ಸಾಮಾನ್ಯವಾಗಿ ಇಂಥ ನಿರ್ಮಾಪಕರು ನಾಲ್ಕೈದು ಸಿನಿಮಾಗಳನ್ನು ಒಟ್ಟೊಟ್ಟಿಗೇ ನಿರ್ಮಾಣ ಮಾಡುತ್ತಿರುತ್ತಾರೆ. ಈ ನಾಲ್ಕೈದು ಸಿನಿಮಾಗಳ ಟೈಟಲ್‌ಗಳನ್ನು ತೋರಿಸಿ ಸಾಲ ತಂದಿರುತ್ತಾರೆ. ಐದರಲ್ಲಿ ಎರಡು ಸಿನಿಮಾಗಳು ಹಿಟ್ ಆಗಿ, ಉಳಿದವು ಅಲ್ಲಿಗಲ್ಲಿಗೆ ಆದರೂ ಸಾಕು ಅವರ ಸಾಲದ ಭಾರ ತೀರಿಹೋಗುತ್ತದೆ. ತೀರದಿದ್ದರೆ ಇನ್ನೊಬ್ಬರಿಂದ ಸಾಲ ತಂದು ಮತ್ತಷ್ಟು ಸಿನಿಮಾ ನಿರ್ಮಾಣ ಮಾಡಿ ಹಳೆ ಸಾಲ ತೀರಿಸಿ ಹೊಸ ಗೆಲುವಿಗಾಗಿ ಕಾಯುತ್ತಾರೆ.

ಈ ಜೂಜು 'ವರ್ಕೌಟ್' ಆಗಲು ಬೇಕಾದ ಪ್ರಾಥಮಿಕ ಅಗತ್ಯ 'ಗಾಡಿ ಚಾಲ್ತಿಯಲ್ಲಿರಬೇಕು'. ಆದರೆ ಕೊರೊನಾ ಈಗ ಆ ಗಾಡಿಯ ಚಕ್ರಗಳನ್ನೇ ಸೀಲ್‌ಡೌನ್ ಮಾಡುತ್ತಿದೆ. ಪರಿಣಾಮ ಅರ್ಧಮರ್ಧ ಸಿನಿಮಾ ಮಾಡಿರುವ ನಿರ್ದೇಶಕ, ಅದಕ್ಕೆ ಹಣ ಹೂಡಿರುವ ನಿರ್ಮಾಪಕ, ಅವನಿಗೆ ಸಾಲ ಕೊಟ್ಟಿರುವ ಫೈನಾನ್ಸಿಯರ್, ಎಲ್ಲರೂ ಕೂತಿರುವ ಹಡಗಿನೊಳಗೆ ಉಪ್ಪುನೀರು ನುಗ್ಗಲಾರಂಭಿಸಿದೆ.

'ಈ ವರ್ಷ ಒಂದು ರೀತಿಯಲ್ಲಿ ಟೈಮ್ ಫಿಕ್ಸ್ ಆಗಿಬಿಟ್ಟಿತ್ತು. ಫೆಬ್ರುವರಿಯಲ್ಲಿ ಪೊಗರು, ಮಾರ್ಚ್‌ನಲ್ಲಿ ರಾಬರ್ಟ್ ಮತ್ತು ಏಪ್ರಿಲ್‌ನಲ್ಲಿ ಯುವರತ್ನ ಅಂತ. ಅವು ಮೂರೂ ಸಿನಿಮಾ ಬಿಡುಗಡೆಯಾದವು. ಮೇ ತಿಂಗಳ ನಂತರ ನನ್ನ ನಿರ್ಮಾಣದ ನಾಲ್ಕು ಸಿನಿಮಾಗಳು ಬಿಡುಗಡೆ ಮಾಡುವ ಪ್ಲ್ಯಾನ್ ಮಾಡಿಕೊಂಡಿದ್ದೆವು. ಆದರೆ ನಾವೀಗ ಪೂರ್ತಿ ಅತಂತ್ರರಾಗಿದ್ದೇವೆ. ಯಾವಾಗ ಲಾಕ್‌ಡೌನ್ ಆಗುತ್ತದೆ ಗೊತ್ತಿಲ್ಲ. ಥಿಯೇಟರ್‌ನಲ್ಲಿ ಶೇ 50 ಪ್ರೇಕ್ಷಕರಿಗೆ ಅನುಮತಿ ಇರಲಿ, ಶೇ 100ರಷ್ಟು ಅನುಮತಿ ಕೊಡಲಿ, ಜನರಂತೂ ಚಿತ್ರಮಂದಿರಗಳಿಗೆ ಬರುವುದಿಲ್ಲ. ಸಿನಿಮಾ ಬಿಡುಗಡೆ ಮಾಡುವುದು ಹೇಗೆ?' ಎಂದು ಪ್ರಶ್ನಿಸುತ್ತಾರೆ ನಿರ್ಮಾಪಕ ಪುಷ್ಕರ್ ಮಲ್ಲಿಕಾರ್ಜುನಯ್ಯ. ಅವರ ನಾಲ್ಕು ಸಿನಿಮಾಗಳು ವರ್ಷಾರಂಭದಲ್ಲಿಯೇ ಬಿಡುಗಡೆಗೆ ಸಿದ್ಧವಾಗಿವೆ; ಆದರೆ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ.

ಒಬ್ಬ ಸ್ಟಾರ್ ನಟನ ಸಿನಿಮಾ ಸಿದ್ಧವಾದ ಮೇಲೆ ಆರು ತಿಂಗಳು ಬಿಡುಗಡೆ ಮಾಡದೇ



ಜಯತೀರ್ಥ

ಉಳಿಸಿಕೊಂಡರೆ ಆಗ ಹೆಚ್ಚುವ ವೆಚ್ಚದಿಂದ ಕನಿಷ್ಠ ಮೂರು ಸಾಮಾನ್ಯ ಬಜೆಟ್ ಸಿನಿಮಾ ಮಾಡಬಹುದು! ಅಂದಮೇಲೆ, 2020ರ ಆರಂಭದಲ್ಲಿಯೇ ತಯಾರಾಗಿ ಇನ್ನೂ ಬಿಡುಗಡೆಯಾಗದೆ ಉಳಿದಿರುವ ಸಿನಿಮಾಗಳು, ಅವುಗಳ ನಿರ್ಮಾಪಕರ ಪಾಡು ಏನು ಎಂಬುದನ್ನು ನೀವೇ ಊಹಿಸಿಕೊಳ್ಳಿ!

ಕಳೆದ ವರ್ಷ ಲಾಕ್‌ಡೌನ್ ಆದಾಗಲೇ ಏನಿಲ್ಲವೆಂದರೂ ಇನ್ನೂರೈವತ್ತು ಕನ್ನಡ ಸಿನಿಮಾಗಳು ಬಿಡುಗಡೆಗೆ ತಯಾರಾಗಿದ್ದವು. ಈಗ ಆ ಸಂಖ್ಯೆ ದುಪ್ಪಟ್ಟಾಗಿರಬಹುದು. ಒಂದು ಸಿನಿಮಾಗೆ ಸರಾಸರಿ ಎರಡು ಕೋಟಿ ಖರ್ಚಾಗಿದೆ ಎಂದರೂ ಒಂದು ಸಾವಿರ ಕೋಟಿ ರೂಪಾಯಿ ಡಬ್ಬದಲ್ಲಿ ಕೂತಿದೆ! ಮತ್ತದರಲ್ಲಿ ಶೇ 75ಕ್ಕಿಂತ ಹೆಚ್ಚಿನದು ಸಾಲದ ಹಣವಾಗಿರುತ್ತದೆ! ಅದೂ ಬಡ್ಡಿ, ಚಕ್ರಬಡ್ಡಿಯ ಸಾಲ. ಅಂದರೆ ಚಿತ್ರರಂಗವನ್ನು ಸುತ್ತಿಕೊಳ್ಳುತ್ತಿರುವ ಸಾಲದ ಕುಣಿಕೆ ಎಷ್ಟು ಭಯಾನಕವಾಗಿದ್ದಿರಬಹುದು? ಈ ಕುಸಿತದಿಂದ ಮುಂದಿನ ದಿನಗಳಲ್ಲಿ ಉಂಟಾಗುವ ಅಡ್ಡಪರಿಣಾಮಗಳ ಕರಾಳತೆಯನ್ನು ಊಹಿಸಿಕೊಳ್ಳುವುದೂ ಕಷ್ಟ.

'ವರ್ಷಕ್ಕೆ ಎರಡೂವರೆ ಮೂರು ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ನಡೆಯುವ ಇಂಡಸ್ಟ್ರಿ ನಮ್ಮದು. ಇದರಲ್ಲಿ ಬಹುತೇಕ ಹಣ ಸಾಲ ಮಾಡಿ ತಂದಿದ್ದಾಗಿರುತ್ತದೆ. ಸಿನಿಮಾ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದರೆ ನಮಗೆ ಸಾಲ ಕೊಟ್ಟವರು ಸುಮ್ಮನಿರುತ್ತಾರೆಯೇ? ಅವರು ಬಡ್ಡಿ ಕಡಿಮೆ ಮಾಡುತ್ತಾರೆಯೇ? ಪ್ರತಿಭೆಯನ್ನೇ ಬಂಡವಾಳ ಮಾಡಿಕೊಂಡವರು ಹೇಗೋ ಬದುಕಿಕೊಂಡುಬಿಡಬಹುದು, ಆದರೆ ಹಣದ ಬಂಡವಾಳ ಹೂಡುವವರ ಪರಿಸ್ಥಿತಿ ಯಾರಿಗೂ ಬೇಡ' ಎಂದು ಬೇಸರದಿಂದಲೇ ಹೇಳಿಕೊಳ್ಳುತ್ತಾರೆ ಪುಷ್ಕರ್.

ಪ್ರಕೃತಿಯೇ ಎಳೆದ ಬರೆಗೆ ಮುಲಾಮಿನ ಬದಲು ಉಪ್ಪು ಎರಚುವ ಸರ್ಕಾರದ ಕುರಿತೂ ಪುಷ್ಕರ್ ಅಸಮಾಧಾನ ವ್ಯಕ್ತಪಡಿಸುತ್ತಾರೆ.

'ಚೀನಾ, ಕೊರಿಯಾದಂಥ ದೇಶಗಳಲ್ಲಿ ಸರ್ಕಾರ ಸಿನಿಮಾ ಮಾಡುವವರಿಗೆ ಧನಸಹಾಯ ಮಾಡುತ್ತದೆ. ನಮ್ಮ ದೇಶದ ಕಥೆಯನ್ನು ಜಗತ್ತಿನ ಜನರೆಲ್ಲ ನೋಡುವ ಹಾಗೆ ಸಿನಿಮಾ ಮಾಡಿ ಎಂದು ಪ್ರೋತ್ಸಾಹಿಸಲಾಗುತ್ತದೆ. ನಮ್ಮಲ್ಲಿ ಹಾಗಿಲ್ಲ. ವಿಪರೀತ ತೆರಿಗೆ ಹಾಕುತ್ತಾರೆ. ಸುಲಭಕ್ಕೆ ಸಾಲವೂ ಸಿಗುವುದಿಲ್ಲ. ಮೇಕ್ ಇನ್ ಇಂಡಿಯಾ ಅಂತೆಲ್ಲ ಬೇರೆ ಇಂಡಸ್ಟ್ರಿಗಳಿಗೆ ಸರ್ಕಾರ ಸಾಕಷ್ಟು ಪ್ರೋತ್ಸಾಹ ಕೊಡುತ್ತದಲ್ಲ, ಹಾಗೆ ಸಿನಿಮಾಗೂ ಯಾಕೆ ಮಾಡಬಾರದು? ಸಿನಿಮಾ ಪವರ್‌ಫುಲ್ ಮೀಡಿಯಾ ಅಲ್ಲವೇ? ಇದು ನಮ್ಮ ದೇಶಕ್ಕೆ ಅಗತ್ಯವಾದ ಕಲಾಪ್ರಕಾರ ಅಲ್ಲವೇ?' ಎಂದು ಪ್ರಶ್ನಿಸುವ ಅವರು, 'ನಾವು ಅತ್ಯಂತ ನಿರ್ಲಕ್ಷಿತರು' ಎಂದು ವಿಷಾದದಿಂದಲೇ ನಗುತ್ತಾರೆ.

ಪುಷ್ಕರ್ ಅವರೇ ಹೇಳುವ ಪ್ರಕಾರ, ಸದ್ಯಕ್ಕಂತೂ ಯಾರೂ ಹೊಸ ಸಿನಿಮಾ ಶುರುಮಾಡುವ ಪರಿಸ್ಥಿತಿಯಲ್ಲಿಲ್ಲ. ವರ್ಷಕ್ಕೆ ಇನ್ನೂರೈವತ್ತರಿಂದ ಮುನ್ನೂರು ಸಿನಿಮಾ ಬಿಡುಗಡೆಯಾಗುತ್ತಿದ್ದ ಚಿತ್ರರಂಗದಲ್ಲಿ ಐವತ್ತು




'ರಾಬರ್ಟ್' ಚಿತ್ರದ ಹೊಸ ಪೋಸ್ಟರ್